ಸಹಕಾರ ಸಂಘಗಳಿಂದ ರೈತರು ಪಡೆದ ಅಲ್ಪಾವಧಿ ಕೃಷಿ ಸಾಲದ ಬಗ್ಗೆ

ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-

28 (66) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಸಹಕಾರ ಸಂಘಗಳಿಂದ ರೈತರು ಪಡೆದಿರುವ ಅಲ್ಪಾವಧಿ ಕೃಷಿ ಸಾಲದ ಬಾಬ್ತು ತಲಾ ಒಂದು ಲಕ್ಷದವರೆಗೆ ಸರ್ಕಾರ ಸಾಲ ಮನ್ನಾ ಮಾಡಿದೆಯೇ ;

(ಆ) ಹಾಗಿದ್ದಲ್ಲಿ, ಯಾವ ಅವಧಿಯಲ್ಲಿ ಎಷ್ಟು ಫಲಾನುಭವಿಗಳ, ಎಷ್ಟು ಮೊತ್ತದ ಸಾಲವನ್ನು ಮನ್ನಾ ಮಾಡಲಾಗಿದೆ ; (ಜಿಲ್ಲಾವಾರು ಪೂರ್ಣ ವಿವರ ನೀಡುವುದು)

(ಇ) ಸಾಲ ತೀರುವಳಿ ಅವಧಿ ಮುಕ್ತಾಯಗೊಂಡಿರುವ ಫಲಾನುಭವಿಗಳ ಸಂಖ್ಯೆ ಎಷ್ಟು ; ಇವರ ಸಂಬಂಧ ಪಾವತಿಸಬೇಕಾಗಿರುವ ಮೊತ್ತವೆಷ್ಟು; ಇದುವರೆಗೆ ಸರ್ಕಾರ ಎಷ್ಟು ಮಂದಿಗೆ, ಎಷ್ಟು ಮೊತ್ತವನ್ನು ಅವರ ಖಾತೆಗಳಿಗೆ ಜಮಾ ಮಾಡಲಾಗಿದೆ ; (ಜಿಲ್ಲಾವಾರು ಪೂರ್ಣ ವಿವರ ನೀಡುವುದು)

(ಈ) ಸದರಿ ಸಾಲ ಮನ್ನಾ ಯೋಜನೆಯಡಿಯಲ್ಲಿ ಎಷ್ಟು ಮಂದಿಗೆ, ಎಷ್ಟು ಮೊತ್ತದ ಮರು ಸಾಲವನ್ನು ಇದುವರೆಗೆ ನೀಡಲಾಗಿದೆ ; (ಜಿಲ್ಲಾವಾರು ಪೂರ್ಣ ವಿವರ ನೀಡುವುದು)

(ಉ) ಪ್ರಥಮ ಬಾರಿಗೆ ಸಹಕಾರ ಸಂಘಗಳಲ್ಲಿ ಅಲ್ಪಾವಧಿ ಕೃಷಿ ಸಾಲಕ್ಕೆ ಅರ್ಜಿ ಸಲ್ಲಿಸಿದವರ ಸಂಖ್ಯೆ ಎಷ್ಟು ; (ಜಿಲ್ಲಾವಾರು ಪೂರ್ಣ ವಿವರ ನೀಡುವುದು)

(ಊ) ಹೊಸ ಅರ್ಜಿದಾರರಿಗೆ ತಲಾ ಎಷ್ಟು ಮೊತ್ತದ ಸಾಲವನ್ನು ನೀಡಲಾಗುತ್ತಿದೆ ; ಇದುವರೆಗೆ ಎಷ್ಟು ಮಂದಿಗೆ ಎಷ್ಟು ಮೊತ್ತದ ಸಾಲವನ್ನು ನೀಡಲಾಗಿದೆ ? (ಜಿಲ್ಲಾವಾರು ಪೂರ್ಣ ವಿವರ ನೀಡುವುದು)